# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದಡಿ ದಾವಣಗೆರೆ ಜಿಲ್ಲೆಯ ಗ್ರಾಮಗಳ ಆಯ್ಕೆ ಅನುಮೋದನೆ ಕುರಿತು.

ಉಲ್ಲೇಖ:
1. ಸರ್ಕಾರಿ ಆದೇಶ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:29.06.2012
2. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ:29:ಸುಗ್ರಾಯೋ:2012 ದಿ:04.07.2012
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ದಾವಣಗೆರೆ ಇವರ ಪತ್ರದ ಸಂಖ್ಯೆ:ಜಿಪಂದಾ/ಯೋವಿ/ಸು.ಗ್ರಾ.ಯೋ/ಸಿಆರ್/2012-13, ದಿನಾಂಕ:06.08.2012

**ಪ್ರಸ್ತಾವನೆ:**

2012-13ನೇ ಸಾಲಿನ ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ 1000 ಗ್ರಾಮಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. 5ನೇ ಹಂತದ ಯೋಜನೆಯ ಅನುಷ್ಠಾನ ಮಾಡುವ ಬಗ್ಗೆ, ಗ್ರಾಮಗಳ ಆಯ್ಕೆ, ಅನುದಾನ ಹಂಚಿಕೆ ಇತ್ಯಾದಿ ವಿಷಯಗಳ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ವಿವರವಾಗಿ ಮೇಲಿನ ಉಲ್ಲೇಖ (1) ಮತ್ತು (2)ರ ಸರ್ಕಾರದ ಆದೇಶ ಹಾಗೂ ಸುತ್ತೋಲೆಯನ್ನು ಹೊರಡಿಸಲಾಗಿದೆ. ಅದರನ್ವಯ ದಾವಣಗೆರೆ ಜಿಲ್ಲೆಯ ಚನ್ನಗಿರಿ, ದಾವಣಗೆರೆ, ಹರಪ್ಪನಹಳ್ಳಿ, ಹರಿಹರ, ಹೊನ್ನಾಳಿ ಮತ್ತು ಜಗಳೂರು ತಾಲ್ಲೂಕುಗಳ ಒಟ್ಟು 56 ಗ್ರಾಮಗಳನ್ನು ಆಯ್ಕೆ ಮಾಡಿ ಶಾಸಕರಿಂದ ಶಿಫಾರಸ್ಸು ಮಾಡಿದ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಿಂದ ಅನುಮೋದನೆ ಪಡೆದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ದಾವಣಗೆರೆ ಅವರು ಉಲ್ಲೇಖ(3)ರಲ್ಲಿ ಸರ್ಕಾರದ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ನಿಯಮಗಳನ್ವಯ ಪರಿಶೀಲಿಸಿದ್ದು, ಆಯ್ಕೆ ಪಟ್ಟಿಯನ್ನು ಅಧಿಕೃತವಾಗಿ ಹೊರಡಿಸಲು ಸರ್ಕಾರಿ ಆದೇಶದ ಅಗತ್ಯವಿದೆ. ಅನುಬಂಧದಲ್ಲಿರುವ ದಾವಣಗೆರೆ ಜಿಲ್ಲೆಯ 6 ತಾಲ್ಲೂಕುಗಳ 56 ಗ್ರಾಮಗಳನ್ನು ಸುವರ್ಣ ಗ್ರಾಮೋದಯ ಯೋಜನೆಯ 5ನೇ ಹಂತದಡಿ ಅನುಷ್ಠಾನಗೊಳಿಸಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:80:ಸುಗ್ರಾಯೋ:2012. ಬೆಂಗಳೂರು, ದಿನಾಂಕ:22.08.2012**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಐದನೇ ಹಂತದ ಸುವರ್ಣ ಗ್ರಾಮೋದಯ ಯೋಜನೆಯಡಿ ದಾವಣಗೆರೆ ಜಿಲ್ಲೆಯ 6 ತಾಲ್ಲೂಕುಗಳ 56 ಗ್ರಾಮಗಳಿಗೆ ಅನುಬಂಧದಲ್ಲಿ ನಮೂದಿಸಿರುವಂತೆ ಸದರಿ ಗ್ರಾಮಗಳನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ. ಅನುಷ್ಠಾನಗೊಳಿಸುವಾಗ ಈ ಕೆಳಕಂಡ ನಿಯಮಗಳನ್ನು ಪಾಲಿಸಲು ಆದೇಶಿಸಿದೆ.

1. ಉಲ್ಲೇಖ (1)ರ ಸರ್ಕಾರಿ ಆದೇಶದಲ್ಲಿ ಹಾಗೂ ಉಲ್ಲೇಖ (2)ರ ಸುತ್ತೋಲೆಯಲ್ಲಿ ಹೊರಡಿಸಲಾದ ಯೋಜನಾ ಮಾರ್ಗಸೂಚಿಯಂತೆ ಪ್ರತಿ ಗ್ರಾಮಕ್ಕೆ ಸಂಬಂಧಿಸಿದಂತೆ ಸಮಗ್ರ ಅಭಿವೃದ್ಧಿ ಯೋಜನೆಯನ್ನು ರೂಪಿಸಿ ಅನುಮೋದನೆ ನೀಡಿ ಕಾರ್ಯಗತಗೊಳಿಸುವುದು.
2. ಸರ್ಕಾರಿ ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-1ರಲ್ಲಿ ಸೂಚಿಸಿದ ತಾಲ್ಲೂಕುವಾರು ನಿಗದಿಪಡಿಸಿರುವ ಅನುದಾನದ ಮಿತಿಯೊಳಗೆ ಕಾರ್ಯಕ್ರಮವನ್ನು ಕೈಗೊಳ್ಳುವುದು.
3. ಗ್ರಾಮವಾರು ಅನುದಾನವನ್ನು ನಿಗದಿಪಡಿಸುವಾಗ ಗ್ರಾಮದ ಜನಸಂಖ್ಯೆಗನುಗುಣವಾಗಿ ತಲಾನುದಾನ ನಿಯಮಕ್ಕೆ ತಕ್ಕಂತೆ ನಿಗದಿಪಡಿಸಿಕೊಳ್ಳತಕ್ಕದ್ದು.
4. ಸುತ್ತೋಲೆಯೊಂದಿಗೆ ಲಗತ್ತಿಸಲಾದ ಅನುಬಂಧ-2ರ ವೇಳಾಪಟ್ಟಿಗನುಗುಣವಾಗಿ ಕಾರ್ಯಾನುಷ್ಠಾನ ಮಾಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು(ಸು.ಗ್ರಾ) ಹಾಗೂ
ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಯನ್ನು:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ದಾವಣಗೆರೆ.
2. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ದಾವಣಗೆರೆ
3. ಮಾನ್ಯ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮಾನ್ಯ ಉಪ ಮುಖ್ಯ ಮಂತ್ರಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಮುಖ್ಯ ಲೆಕ್ಕಾಧಿಕಾರಿ ಮತ್ತು ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್, ದಾವಣಗೆರೆ
6. ಸಂಕಲನಕಾರರು, ರಾಜ್ಯಪತ್ರ, ಬೆಂಗಳೂರು.
7. ಮಹಾಲೇಖಪಾಲರು, ಬೆಂಗಳೂರು.
8. ಹೆಚ್ಚುವರಿ.

ಅನುಬಂಧ

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:80:ಸುಗ್ರಾಯೋ:2012, ದಿನಾಂಕ:22.08.2012**

## ಜಿಲ್ಲೆ: ದಾವಣಗೆರೆ

| ಕ್ರ.ಸಂ. | ತಾಲ್ಲೂಕು | ಗ್ರಾಮಗಳ ಹೆಸರು | 2001ರ ಜನಗಣತಿ ಪ್ರಕಾರ ಜನಸಂಖ್ಯೆ | ನಿಗದಿಪಡಿಸ ಬೇಕಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | ಚನ್ನಗಿರಿ | ಚಿರಡೋಣಿ | 4873 | 121.28 |
| | | ಬೆಳಲಗೆರೆ | 3285 | 81.76 |
| | | ಕಣಿವೆಬಿಳಚಿ | 2450 | 60.97 |
| | | ಅಗರಬನ್ನಿಹಟ್ಟಿ | 2326 | 57.89 |
| | | ದೊಡ್ಡಮಲ್ಲಾಪುರ | 1958 | 48.73 |
| | | ಹೊದಿಗೆರೆ | 4029 | 100.27 |
| | | ಅಬ್ಬಿಗೆರೆ | 2520 | 62.72 |
| | | ಪಂಡೋಮಟ್ಟಿ | 3744 | 93.16 |
| | | ಅಜ್ಜಿಹಳ್ಳಿ | 2219 | 55.23 |
| | | ದುರ್ವಿಗೆರೆ | 2023 | 50.35 |
| | | ಮೆದಿಕೆರೆ | 2115 | 52.64 |
| | | ಒಟ್ಟು | 31542 | 785.00 |
| 2 | ದಾವಣಗೆರೆ | ಮಳಲ್ಕೆರೆ | 2773 | 66.95 |
| | | ಬಾಡ | 3544 | 85.57 |
| | | ರಾಮಗೊಂಡನಹಳ್ಳಿ | 2082 | 50.27 |
| | | ಹುಚ್ಚವ್ವನಹಳ್ಳಿ | 3510 | 84.75 |
| | | ಗುಡಾಳ್ | 2853 | 68.88 |
| | | ಹೆಮ್ಮನಬೇತೂರು | 1454 | 35.11 |
| | | ಕೈದಾಳೆ | 2685 | 64.83 |
| | | ಕಡ್ಲೇಬಾಳು | 2343 | 56.57 |
| | | ಹಳೇಬಾತಿ | 2873 | 69.37 |
| | | ಶ್ಯಾಗಲೆ | 4130 | 99.70 |
| | | ಒಟ್ಟು | 28247 | 682.00 |
| 3 | ಹರಪನಹಳ್ಳಿ | ನಿಟ್ಟೂರು | 2299 | 49.74 |
| | | ಕೂಲಹಳ್ಳಿ | 2984 | 64.56 |
| | | ಹರಸನಹಾಳು | 2324 | 50.28 |
| | | ಸಾಸ್ವೆಹಳ್ಳಿ | 3903 | 84.44 |
| | | ಕಂಚೀಕೆರೆ | 4891 | 105.82 |
| | | ಬಳಿಗನೂರು | 997 | 21.58 |
| | | ಗುಂಡಗತ್ತಿ | 4029 | 87.17 |
| | | ಉಚ್ಚಂಗಿದುರ್ಗ | 8616 | 186.41 |
| | | ಒಟ್ಟು | 30043 | 650.00 |

| | | | | |
|---|---|---|---|---|
| 4 | ಹರಿಹರ | ಗುತ್ತೂರು | 5676 | 135.70 |
| | | ಕಡರನಾಯನಕಹಳ್ಳಿ | 3312 | 74.40 |
| | | ಕುಣಿಬೆಳಕೆರೆ | 3749 | 89.63 |
| | | ಕೊಂಡಜ್ಜಿ | 3902 | 93.29 |
| | | ಹರಳಹಳ್ಳಿ | 2509 | 59.98 |
| | | **ಒಟ್ಟು** | **18948** | **453.00** |
| 5 | ಹೊನ್ನಾಳಿ | ಹನಗವಾಡಿ | 1940 | 42.01 |
| | | ಹುಣಸಘಟ್ಟ | 2240 | 48.50 |
| | | ಅರಕೆರೆ | 2368 | 51.27 |
| | | ಬನ್ನಿಕೊಡು | 2095 | 45.36 |
| | | ಹಿರೇಗೋಣಿಗೆರೆ | 2955 | 63.98 |
| | | ಒಡೆಯರ್ ಹತ್ತೂರು | 2070 | 44.82 |
| | | ಗೋವಿಕೋವಿ | 1656 | 35.86 |
| | | ಹೆಚ್.ಗೋಪಗೊಂಡನಹಳ್ಳಿ | 1705 | 36.92 |
| | | ಫವಲನಹಳ್ಳಿ | 1583 | 34.28 |
| | | ದೊಡ್ಡೇರಿ | 1747 | 37.83 |
| | | ಕೆಂಚಿಕೊಪ್ಪ | 1934 | 41.88 |
| | | ಚೆನ್ನಿಕಟ್ಟೆ | 1404 | 30.40 |
| | | ಮಲೆಕುಂಬಳೂರು | 3690 | 79.89 |
| | | **ಒಟ್ಟು** | **27387** | **593.00** |
| 6 | ಜಗಳೂರು | ಅಣಬೂರು | 2323 | 56.95 |
| | | ದೊಣ್ಣೇಹಳ್ಳಿ | 2687 | 65.87 |
| | | ಆಲೆಕಲ್ಲು | 2324 | 56.97 |
| | | ದಿದ್ದಿಗಿ | 1635 | 40.08 |
| | | ಮರಿಕುಂಟೆ | 1719 | 42.14 |
| | | ಗಡಿಮಾಕುಂಟೆ | 1696 | 41.58 |
| | | ದೇವಿಕೆರೆ | 1334 | 32.70 |
| | | ಹೊಸಕೆರೆ | 1882 | 46.14 |
| | | ಕ್ಯಾಸೇನಹಳ್ಳಿ | 1247 | 30.57 |
| | | **ಒಟ್ಟು** | **16847** | **413.00** |
| | | **ಜಿಲ್ಲೆಯ ಒಟ್ಟು ಮೊತ್ತ** | **153014** | **3576.00** |

22/8/12

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು(ಸು.ಗ್ರಾ) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ